Misc.486/22
RW-1

ಇಂದು ದಿ.21-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ** - ಎದುರುದಾರರ ಪರ ಶ್ರೀ. ಎನ್.ಕೆ. ವಕೀಲರಿಂದ.

ನಾನು ಈ ಪ್ರಕರಣದಲ್ಲಿ ಎದುರುದಾರಳಿದ್ದು, ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ನಾನೇ ಹೇಳಿ ಬರೆಸಿ , ಓದಿ , ತಿಳಿದುಕೊಂಡು ಅದಕ್ಕೆ ಸಹಿ ಮಾಡಿದೇನೆ.

ಎದುರುದಾರ ಕಂಪನಿಯವರು ನನಗೆ ಸಾಕ್ಷಿ ನುಡಿಯಲು ಅಧಿಕಾರ ಪತ್ರ ಕೊಟ್ಟಿದ್ದು, ಅದನ್ನು ನಿ.ಆರ್-1 ಎಂದು ಗುರುತಿಸಲಾಯಿತು (ಮೂಲ ಪ್ರತಿ ಮಿಸ್.485/22 ರಲ್ಲಿ ಇರುತ್ತದೆ. ). ಕಾರ್ಯ ನಿರ್ವಾಹಕ ಇಂಜಿನಿಯರ್ ಬೃಹತ್ ಕಾಮಗಾರಿ ವಿಭಾಗ ದಾವಣಗೆರೆ ಇವರು ಅಧೀಕ್ಷಕ ಇಂಜಿನಿಯರ್ ಪ್ರಸರಣ ಮತ್ತು ವಿದ್ಯತ್ ಪ್ರಸರಣ ನಿಗಮ ನಿಯಮಿತ ಇವರಿಗೆ ಉಲ್ಲೇಖ 6 ರಲ್ಲಿ ದಾವಣಗೆರೆಯಿಂದ ಶಿವಮೊಗ್ಗ 1 ರ ಕಾಮಗಾರಿಯನ್ನು ಹಂತ ಹಂತವಾಗಿ ಪೂರ್ಣಗೊಳಿಸಿ ಅಂತಿಮವಾಗಿ ದಿ.22-09-2014 ರಂದು ಚಾಲನೆ ಗೊಳಿಸಿರುತ್ತಾರೆ ಅಂತ ಪತ್ರ ಬರೆದಿದ್ದು, ಸದರಿ ಪತ್ರ ನೋಡುತ್ತಿದ್ದು, ಅದನ್ನು ನಿ.ಆರ್.2 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಃ ಅರ್ಜಿದಾರರ ಪರ ಶ್ರೀ ಎಸ್ ಆರ್ ಎ ವಕೀಲರಿಂದ.

ಈ ಕೇಸಿನ ಬಗ್ಗೆ ನನಗೆ ಮಾಹಿತಿ ಇದೆ. ಯಾರು ಯಾರ ಮೇಲೆ ಈ ಪ್ರಕರಣ ದಾಖಲು ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇದೆ. ನಾನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಕೆ ಪಿ ಟಿ ಸಿ ಎಲ್ ಇರುತ್ತೇನೆ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನ್ನು ಪಕ್ಷಗಾರರನ್ನಾಗಿ ಮಾಡಿ ಪ್ರಕರಣ ದಾಖಲು ಮಾಡಿರುತ್ತಾರೆ.

ಗಾಳಿ ಗೋಪುರದಿಂದ ಬಂದ ವಿದ್ಯುತ್ ನ್ನು ವಿದ್ಯುತ್ ಸಂಗ್ರಹಣಾ ಕೇಂದ್ರಕ್ಕೆ ರವಾನಿಸುತ್ತೇವೆ. ಸದರಿ ವಿದ್ಯುತ್ ನ್ನು ಗೃಹೋಪಯೋಗಿ, ವಾಣಿಜ್ಯ ಉದ್ದೇಶಕ್ಕೆ, ಸಾರ್ವಜನಿಕರಿಗೆ , ಕಾರ್ಖಾನೆಗೆ , ಇತರೆ ಉದ್ದೇಶಕ್ಕೆ ನಾವು ಸರಬರಾಜು ಮಾಡುತ್ತೇವೆ . ಹೆಚ್ಚಿಗೆ ಇದ್ದಲ್ಲಿ ಬೇರೆ ರಾಜ್ಯಗಳಿಗೆ ವಿದ್ಯುತ್ ಪುರೈಸುತ್ತೇವೆ. ಅದಕ್ಕೆ ನಾವು ಶುಲ್ಕ

ಪಡೆಯುತ್ತೇವೆ. ಕಾರ್ಖಾನೆ, ವಾಣಿಜ್ಯೋದ್ಯಮಕ್ಕೆ ಸರಬರಾಜಾದ ವಿದ್ಯುತ್ ಶುಲ್ಕ ಪಡೆಯುತ್ತೇವೆ. ಸದರಿ ವಿದ್ಯುತಿ ಜಮೀನುಗಳಲ್ಲಿ ಎಳೆದಿರುವ ತಂತಿ ಮೂಲಕ ಹೋಗಬೇಕು ಎನ್ನುವುದು ನಿಜ.

ನೀರಾವರಿಯಾಗಲಿ , ಖುಶ್ಕಿ ಜಮೀನಿನಾಲಿ ಅಥವಾ ತರಿ ಜಮೀನುಗಳ ಮುಖಾಂತರ ವಿದ್ಯುತ್ ಲೈನ್ ಎಳೆಯುತ್ತಾರೆ. ವಿದುತ್ಯ ಲೈನ್ ಕೆಳಗೆ ಯಾವುದೇ ಕಟ್ಟಡ ಕಟ್ಟಲಾಗುವುದಿಲ್ಲ. ಅದೇ ರೀತಿ ವಿದ್ಯುತ್ ಲೈನ್ ಕೆಳಗಡೆ ಬೇವಿನ ಮರ , ಹುಣಸೆ ಮರ , ಮಾವಿನ ಮರ , ತೆಂಗಿನ ಮರ , ಅಡಿಕೆ ಗಿಡ ಬೆಳೆಯಲಾಗುವುದಿಲ್ಲ. ಅದೇ ಪ್ರಕಾರ ಮೋಟರ್ ಸಹ ಅಳವಡಿಸಲು ಆಗುವುದಿಲ್ಲ. ಸದರಿ ಬೊರನ್ನು ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪಡೆದು ಅದನ್ನು ತೆರವು ಗೊಳಿಸಬೇಕಾಗುತ್ತದೆ. ಸದರಿ ಮೋಟರ್ ಬೇಸ್ಕಾಂ ಮೂಲಕ ಲೈನ್ ಪಡೆಯಬೇಕು. ಬೆಸ್ಕಾಂ ಪವರ್ ಸೆಕ್ಟರ್ ಅಡಿಯಲ್ಲಿ ಬರುತ್ತದೆ.

ವಿದ್ಯುತ್ ಟವರ್ ಅಳವಡಿಸುವುದರಿಂದ ಮತ್ತು ತಂತಿ ಎಳೆಯುವದರಿಂದ ಆ ಭಾಗದ ಜಮೀನಿನ ಮೌಲ್ಯ ಅಪಮೌಲ್ಯವಾಗುತ್ತದೆ ಎನ್ನುವುದು ಸುಳ್ಳು. ವಿದ್ಯುತ್ ಲೈನ ನ್ನು ಪ್ರತಿ ವರ್ಷ ಮೆಂಟೆನನ್ಸ ಮಾಡುತ್ತಾರೆ. ಮೆಂಟೆನನ್ಸ ಮಾಡುವ ಸಮಯದಲ್ಲಿ ಅಲ್ಲಿದ್ದ ಬೆಳೆ ಹಾಳಾಗುತ್ತದೆ ಎನ್ನುವುದು ಸುಳ್ಳು. ಮೆಂಟೆನನ್ಸ ಮಾಡುವಾಗ ಜಮೀನಿನಲ್ಲಿನ ಬೆಳೆ ಹಾಳಾಗುತ್ತಿದ್ದರೂ ಸಹ ಹಾಳಾಗುತ್ತಿಲ್ಲ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಭೂಮಿಯ ಅಪಮೌಲ್ಯವಾಗಿರುವುದರಿಂದ ಅದಕ್ಕೆ ಪರಿಹಾರ ಕೊಡಲು ನಾವು ಬಾಧ್ಯಸ್ಥರಿರುತ್ತೇವೆ ಎನ್ನುವುದು ಸುಳ್ಳು.

ಮಿನಿಸ್ಟರ್ ಆಫ್ ಪವರ್ ಗೈಡ್ ಲೈನ್ಸ ಪ್ರಕಾರ ಅಪಮೌಲ್ಯವಾದ ಜಮೀನಿನಗೆ ಪರಿಹಾರ ಕೊಡಲು ಬರುತ್ತದೆ , ಆದರೆ ಈ ಕೇಸಿಗೆ ಸಂಬಂಧಪಟ್ಟಿರುವುದಿಲ್ಲ. ಲೈನ್ ಎಳೆಯುವ ಸಮಯದಲ್ಲಿ ಬೆಳೆ ನಾಶವಾದ ಬಗ್ಗೆ ಮಾತ್ರ ಪರಿಹಾರ ಕೊಟ್ಟಿರುತ್ತಾರೆ . ಜಮೀನು ಅಪಮೌಲ್ಯವಾದ ಬಗ್ಗೆ ಅಲ್ಲ. ಲೈನ್ ಯಾವ ಯಾವ ಜಮೀನು ಸರ್ವೆ ನಂಬರ್ ನಲ್ಲಿ ಹಾದು ಹೋಗಿದೆ ಎಂಬ ದಾಖಲೆ ನಮ್ಮ ಇಲಾಖೆಯಲ್ಲಿದೆ. ಸದರಿ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ.

ಈ ಕೇಸಿಗೆ ಸಂಬಂಧಪಟ್ಟಂತೆ ದಾವಣಗೆರೆಯಿಂದ ಶಿವಮೊಗ್ಗಕ್ಕೆ ಲೈನ್ ಎಳೆಯಲಾಗಿದೆ. ಇದೇ ಲೈನ್ ಗೆ ಸಂಬಂಧಪಟ್ಟಂತೆ ಮಾನ್ಯ ನ್ಯಾಯಾಲಯದಲ್ಲಿ ಆದೇಶವಾಗಿರುತ್ತದೆ ಎನ್ನುವುದು ನಿಜ. ಆ ಪ್ರಕರಣದಲ್ಲಿ ಮೆಮೋ ಆಫ್ ಕ್ಯಾಲ್ಕುಲೇಶನ್ ಕೊಟ್ಟಿರುತ್ತಾರೆ ಎನ್ನುವುದು ನಿಜ.

ಜಮೀನಿನಲ್ಲಿ ವಿದ್ಯುತ್ ಲೈನ್ ಎಳೆದಿರುವುದರಿಂದ, ರೈತರಿಗೆ ನಷ್ಟವುಟಾಗಿರುವುದರಿಂದ, ನಾವು ರೈತರಿಗೆ ಪರಿಹಾರ ಕೊಡಲು ಬಾಧ್ಯಸ್ಥರಿರುತ್ತೇವೆ ಎನ್ನುವುದು ಸುಳ್ಳು. ಎಷ್ಟು ಏರಿಯಾದಲ್ಲಿ ಲೈನ್ ಎಳೆಯಲಾಗಿದೆ ಎಂಬ ಬಗ್ಗೆ ಮೇಮೋ ಆಫ್ ಕ್ಯಾಲ್ಕುಲೇಶನ್ ಕೊಡಲು ನಾವು ಬಾಧ್ಯಸ್ಥರು ಎನ್ನುವುದು ಸುಳ್ಳು. ಈ ಪ್ರಕರಣದಲ್ಲಿ ಸುಮಾರು **200 ಮೀಟರ್** ಲೈನ್ ಎಳೆಯಲಾಗಿದೆ ಅದಕ್ಕೆ ಸಾಕ್ಷಿ ಸರ್ವೆ ಇಲಾಖೆಯವರು ಮಾಹಿತಿ ನೀಡಬೇಕು ಎಂದು ನುಡಿದಿರುತ್ತಾರೆ. ಲೈನ್ ಎಳೆಯುವ ಸಮಯದಲ್ಲಿ- ಅರ್ಜಿದಾರರಿಗೆ ಸಂಬಂಧಪಟ್ಟ ಅಡಿಕೆ ಗಿಡ , ಮಾವಿನ ಮರ, ಹಾಗೂ ಇನ್ನಿತರೆ ಗಿಡಗಳನ್ನು ಮರಗಳನ್ನು ಕಡೆಯಲಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಲೈನ್ ಎಳೆಯುವ ಸಮಯದಲ್ಲಿಅರ್ಜಿದಾರರ ಜಮೀನಿನಲ್ಲಿ ಬೋರ್ ವೆಲ್ ಇತ್ತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಅರ್ಜಿದಾರರ ಜಮೀನಿನ ಅಪಮೌಲ್ಯವಾಗಿದ್ದರಿಂದ ಈ ಕೇಸಿನಲ್ಲಿ ನಾವು ಪರಿಹಾರ ಕೊಡಲು ಬಾಧ್ಯಸ್ಥರು ಎನ್ನುವುದು ಸರಿಯಲ್ಲ. ಪರಿಹಾರ ಕೊಡಲು ಬಾಧ್ಯಸ್ಥರು ಇದ್ದರೂ ಸಹ ಅದರಿಂದ ತಪ್ಪಿಸಿಕೊಳ್ಳಲು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ರೈತರು ಲೈನ್ ಎಳೆದಾಗಿನಿಂದ ಪರಿಹಾರ ಕೊಡಿ ಎಂದು ನಮಗೆ ಕೇಳಿದರೂ ಸಹ ಪರಿಹಾರ ಕೊಡದೇ ಮುಂದುಡುತ್ತ ಬಂದಿರುತ್ತೇವೆ ಎನ್ನುವುದು ಸರಿಯಲ್ಲ. 2014 ರಿಂದ ನಾವು ರೈತರಿಗೆ ಪರಿಹಾರ ಹಣ ಕೊಡಬೇಕಾಗಿದ್ದು, ಅದನ್ನು ಕೊಟ್ಟಿಲ್ಲದೇ ಇರುವುದರಿಂದ ಅರ್ಜಿದಾರರು ಈ ಕೇಸು ದಾಖಲು ಮಾಡಿರುತ್ತಾರೆ ಎನ್ನುವುದು ಸುಳ್ಳು. ಅರ್ಜಿದಾರರಿಗೆ ಬೆಳೆ ಪರಿಹಾರ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಬೆಳೆ ಪರಿಹಾರ ಕೊಟ್ಟದ್ದರ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲದೇ ಇರುವುದರಿಂದ ಬೆಳೆ ಪರಿಹಾರ ಕೊಟ್ಟಿಲ್ಲದಿದ್ದರೂ ಸಹಿತ ಕೊಟ್ಟಿರುತ್ತೇವೆ ಅಂತ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡುವುದು ನಮ್ಮ ಆಧ್ಯ ಕರ್ತವ್ಯವಾಗಿರುತ್ತದೆ ಎನ್ನುವುದು ಸರಿಯಲ್ಲ.

**<u>ಮರು ವಿಚಾರಣೆಃ</u>**– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.